

ಅವರನ್ನು ಅಲ್ಲಿಯೇ ಮುಂದುವರೆಸುವುದು ಅಸಮಂಜಸವೆನ್ನಿಸಿ ಕಿತ್ತುಹಾಕಿತು. ಈ ಪ್ರಕ್ರಿಯೆಯಿಂದ ತುಂಬಾ ನೊಂದುಕೊಂಡರು ಡಾ. ಚಿರಂಜೀವಿ. 'ಒಂದು ಮಾತು ಹೇಳಿದ್ದರೆ ಸಾಕಿತ್ತು, ನಾನೇ ರಾಜೀನಾಮೆ ಬಿಸಾಕಿ ಹೋಗುತ್ತಿದ್ದೆ. ಹೀಗೆ ಮಾಡಿದುದರಿಂದ ತೀವ್ರ ಅವಮಾನ, ಇರುಸುಮುರುಸು ಉಂಟಾಯಿತು' ಎಂದು ತಮ್ಮ ಖಾಸಗಿ ವಲಯದಲ್ಲಿ ಅಳಲನ್ನು ತೋಡಿಕೊಂಡರು.

***

ಇಂತಿಪ್ಪ ಚಿರಂಜೀವಿಯ ಹೊಟ್ಟೆ ಮುಂದಕ್ಕೆ ಬಂದಾಗಲೇ, ಕಳೆದ ಮೂರು ತಿಂಗಳಿಂದ ಬ್ಲೀಡ್ ಆಗದುದರ ನೆನಪಾದದ್ದು. ಗೈನಕಾಲಜಿಸ್ಟ್ ಆದ ಡಾ.ಮೈಥಿಲಿಯಂತೂ ತೀವ್ರ ಅವಮಾನದಿಂದ ಕುಸಿದುಹೋದರು. 'ಪ್ರಯೋಗ ಪ್ರಯೋಗ ಅಂತ ಅದ್ಯಾವ ಗಂಡಸಿನ ಸಹವಾಸ ಮಾಡಿದಿರಿ?' ಎಂದು ಅಸಹ್ಯಪಟ್ಟುಕೊಂಡರು. ಮಗಳಂತೂ ಅವರ ಮುಖ ನೋಡಲೂ ವಾಕರಿಸಿದಳು. ಕರೆದುಕೊಂಡು ಹೋಗಿ ಗುಟ್ಟಾಗಿ ಅಬಾರ್ಷನ್ ಮಾಡಿಬಿಡುವ ಚಿಂತನೆ ಮಾಡಿದರೂ ಅದರ ವಾಸನೆ ಡಾ.ಚಿರಂಜೀವಿಗೆ ಬಡಿದು, ಗರ್ಭಿಣಿಯ ಸುಖವನ್ನು ತಾನು ಅನುಭವಿಸಲೇಬೇಕು ಎಂದು ಪಟ್ಟುಹಿಡಿದರು.

ಆದರೂ ಡಾ.ಚಿರಂಜೀವಿಯಾಗಿದ್ದಾಗಿನಂಥ ತನ್ನ ಬುದ್ಧಿಮತ್ತೆ ಮಂಕಾಗುತ್ತಿದೆಯಲ್ಲ, ಸೆಮಿನಾರುಗಳಲ್ಲಿ ಮೊದಲಿನ ಪರ್ಫಾರ್ಮೆನ್ಸ್ ಕಾಣುತ್ತಿಲ್ಲವಲ್ಲ, ಇದಕ್ಕೆ ಕಾರಣವೇನಿರಬಹುದು ಎಂದು ಚಿಂತಿತರಾದರು. ಅತ್ತ ಕೆಲಸದಿಂದಲೂ ಕಿತ್ತು ಹಾಕಿದ್ದಾರೆ, ಇತ್ತ ಭಾಷಣಕ್ಕೂ ಯಾರೂ ಕರೆಯುತ್ತಿಲ್ಲ. ಕರೆದರೂ ಬರೀ ಅನುಭವ ಹಂಚಿಕೊಳ್ಳಲು ಕರೆಯುತ್ತಿದ್ದಾರೆಯೇ ವಿನಾ ಜ್ಞಾನ ಹಂಚಿಕೊಳ್ಳಲು ಕರೆಯುತ್ತಿಲ್ಲ. ಅಂದರೆ ತನ್ನ ಬಯೋಲಾಜಿಕಲ್ ಎಫೆಕ್ಟ್‌ನಿಂದ ಸೈಕಾಲಜಿಕಲ್ ಅಫೆಕ್ಟ್ ಕಡಿಮೆಯಾಗುತ್ತಿದೆಯೇ ಎಂಬ ಯೋಚನೆಗೀಡಾದರು. ತನ್ನ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಮಗು, ತನ್ನ ಪಲ್ಲಟದಿಂದ ಅದರ ಮೇಲಾಗಬಹುದಾದ ವಿಪ್ಲವಗಳನ್ನೆಲ್ಲ ಪ್ರಯೋಗಶಾಲೆಯಲ್ಲಿ ಕೂತು ಅಧ್ಯಯನಕ್ಕೆ ಒಳಪಡಿಸಬೇಕೆಂದುಕೊಂಡರು.

ತುಂಬಿದ ಹೊಟ್ಟೆ... ಅದಕ್ಕೆ ಕಾರಣಕರ್ತರಾರೋ ಗೊತ್ತಿಲ್ಲ. ಆದರೂ ಅದನ್ನು ತನ್ನ ಮಡಿಲಲ್ಲಿಟ್ಟು ಬೆಳೆಸುತ್ತಿರುವ ತಾನು ಗಂಡು ಮನಸ್ಸಿನ ಹೆಣ್ಣು. ಎಂಥ ಚೋದ್ಯವಲ್ಲವೇ ಎಂದು ಹುಸಿನಕ್ಕರೂ, ಇದು ಕೇವಲ ಪ್ರಯೋಗವಲ್ಲ, ಅದರ ಹಿಂದೆ ಒಂದು ಮನಸ್ಸಿದೆ, ಒಂದು ಭಾವನೆಯಿದೆ, ಒಂದು ಅಂತಃಕರಣವಿದೆ... ನಾಳೆ ಹುಟ್ಟುವ ಮಗುವಿಗೂ ಒಂದು ಮನಸ್ಸಿರುತ್ತದೆ. ಅದು ತಂದೆ–ತಾಯಿ ಯಾರೆಂದು ಕೇಳಿದರೆ ಏನು ಉತ್ತರ ಕೊಡುವುದು? ಅದಕ್ಕೆ ಪೂರಕವಾದ ವಾತಾವರಣ ಮನೆಯವರಿಂದ, ಸಮಾಜದಿಂದ ಸಿಗುತ್ತಿಲ್ಲವಲ್ಲ! ಒಬ್ಬ ಸೈಕಿಯಾಟ್ರಿಸ್ಟ್ ಆಗಿ ಬೇರೆಯವರನ್ನು ಅಬ್‌ಸರ್ವೇಶನ್‌ಗೆ ಒಳಪಡಿಸುವುದಕ್ಕೂ, ತನ್ನನ್ನೇ ತಾನು ಒಳಪಡಿಸಿಕೊಳ್ಳುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ ಎಂಬುದರ ಅರಿವಾಗಲಾರಂಭಿಸಿತು. ದಿನೇ ದಿನೇ ಹೊಟ್ಟೆ ತನ್ನ ಪಾಡಿಗೆ ತಾನು ಬೆಳೆಯುತ್ತಲೇ ಇತ್ತು. ಅದಕ್ಕೆ ಬೇಕಾದ ವಿಶ್ರಾಂತಿಗೋಸ್ಕರ ಎಲ್ಲೆಲ್ಲೂ ಅಡ್ಡಾಡಲಾಗದೇ ಮನೆಯಲ್ಲಿಯೇ ಕುಳಿತಿರಬೇಕಾದಂಥ ಅನಿವಾರ್ಯತೆ ಉಂಟಾಯಿತು.

ತನ್ನ ಬಯೋಲಾಜಿಕಲ್ ದೇಹದ ಸೃಷ್ಟಿಗೆ ಕಾರಣರಾದ, ಅಂದು ನಿರ್ಲಿಪ್ತವಾಗಿ ವಿದಾಯ ಹೇಳಿಹೋದ ತಂದೆ–ತಾಯಿಯರನ್ನು ಕಾಣ ಬೇಕೆಂಬ ಹಂಬಲವೆಂಬುದು ಬರುಬರುತ್ತ ಗರ್ಭಿಣಿಯ ಬಯಕೆ ಎಂಬಂತೆ ಬಲಿತು, ಕ್ರಮೇಣ ವಿಪರೀತವಾಗಲಾರಂಭಿಸಿತು. ಅವರನ್ನು ತಮ್ಮ ಮನೆವರೆಗೂ ಕರೆಸಿಕೊಳ್ಳಲು ಡಾ. ಮೈಥಿಲಿ ಒಪ್ಪಲಿಲ್ಲ. ಮಕ್ಕಳೂ ನಿರಾಕರಿಸಿದರು. ಮುಂದೆ ಹುಟ್ಟಬಹುದಾದ ಮಗು ತಮಗೆ ಏನಾಗಬೇಕಾಗುತ್ತದೆ ಎಂದು ಒಬ್ಬೊಬ್ಬರೂ ಒಂದೊಂದು ಸಂಬಂಧವನ್ನು ಕಲ್ಪಿಸಿಕೊಂಡು ಒಳಗೊಳಗೇ ನರಳಿದರು.

ಒಂದು ರಾತ್ರಿ... ಎಲ್ಲರೂ ಮಲಗಿದ ಮೇಲೆ ಮೆಲ್ಲಗೆ ಬಾಗಿಲು ತೆರೆದರು. ಹೊರಲಾರದ ಹೊಟ್ಟೆಯನ್ನು ಹೊತ್ತುಕೊಂಡು, ಮುಂದಿರುವ ತಗ್ಗುದಿಣ್ಣೆಗಳನ್ನು ದೂರದಿಂದಲೇ ಗುರುತಿಸುತ್ತ ನಡೆದು ಕಾರನ್ನು ಡ್ರೈವ್ ಮಾಡಿಕೊಂಡು ಅಂತೂ ತನ್ನ ಮೂಲ ಪೇರೆಂಟ್‌ಗಳನ್ನು ತಲುಪಿಯೇಬಿಟ್ಟರು. ತಮ್ಮ ಮಗಳು ಈ ಅಪರಾತ್ರಿಯಲ್ಲಿ ಹೀಗೆ ಬಂದುದನ್ನು ಅವರಾದರೂ ಊಹಿಸಲಾರದೇ ಆಕೆಯದೇ ದೆವ್ವವಿರಬಹುದೆಂದು ಪರಿಪರಿಯಾಗಿ ನಡುಗಿ, ಸಾವರಿಸಿಕೊಂಡು ಒಳಕರೆದು ಕೂರಿಸಿ, ಸಾವಕಾಶ ವಿಚಾರಿಸಲಾದ ಮೇಲೆ ಸ್ವಲ್ಪ ಧೈರ್ಯ ಬಂತು. ಆದರೆ ಗರ್ಭಿಣಿಯಾಗಿರುವ ವಿಚಾರವನ್ನು ಅರಗಿಸಿಕೊಳ್ಳಲಾಗಲಿಲ್ಲ. ಆದರೆ ಅವರೂ ಈ ಪ್ರಯೋಗದ ಒಂದು ಭಾಗವಾದುದರಿಂದ ಗಟ್ಟಿಮನಸ್ಸು ಮಾಡಿ, ತಾವೇ ಮುಂದೆ ನಿಂತು ಹೆರಿಗೆ ಮಾಡಿಸುವುದಾಗಿ ಆಶ್ವಾಸನೆ ನೀಡಿದರು.

ಮನೆಯಲ್ಲಿರಬಹುದಾದ ಆಕೆಯ ಸರ್ಟಿಫಿಕೇಟ್‌ಗಳನ್ನೆಲ್ಲ ಕೇಳಿ ತರಿಸಿಕೊಂಡರು. ಇಂಪನಾ... ತನ್ನ ಹೆಸರು ಎಷ್ಟು ಮುದ್ದಾಗಿದೆಯಲ್ಲ ಎಂದು ಒಳಗೊಳಗೇ ಖುಷಿಪಟ್ಟವರು ಆಕೆಯ ಡಿಗ್ರಿ ಸರ್ಟಿಫಿಕೇಟ್‌ನ್ನು ನೋಡಿ ಹೌಹಾರಿದರು. ಆಕೆಯೂ ಡಾಕ್ಟರೇ! ಅಂದರೆ ತಾನು ಇಂಪನಾಳಾಗಿ ಎಂಬಿಬಿಎಸ್ ಬರೆಯುವಂತಿಲ್ಲ ಎಂಬುದೇ ಒಂದು ದಡ ಸೇರಿಬಿಟ್ಟಂಥ ಖುಷಿ ನೀಡಿತು.

ಅತ್ತ, ಡಾ.ಚಿರಂಜೀವಿ ಕಾಣೆಯಾಗಿದ್ದರೂ, ಕುಟುಂಬ ವರ್ಗದವರು ಕಂಪ್ಲೆಂಟ್ ನೀಡಲಾರದೇ ಒಳಗೊಳಗೇ ನಲುಗಿದರು. ಹುಡುಗಿ ಕಳೆದುಹೋಗಿದ್ದಾಳೆ ಎನ್ನೋಣವೆಂದರೆ ಆಕೆಯ ಹೆಸರೂ ಗೊತ್ತಿಲ್ಲ, ಐಡಿ–ಪಾಸ್‌ಪೋರ್ಟ್‌ಗಳಿರಲಿ, ಫೋಟೊ ಕೂಡ ಮನೆಯಲ್ಲಿ ಇಲ್ಲ. ಹೀಗಿರುವಾಗ ಕಳೆದುಹೋಗಿರುವ ಸುದ್ದಿಯನ್ನು ಹರಡಲಾರದೇ, ಸುಮ್ಮನಿರಲೂ ಆಗದೇ ವಿಚಿತ್ರ ಸಂಕಟ ಅನುಭವಿಸಿದರು.

ಕೆಲವೇ ದಿನಗಳಲ್ಲಿ ಕಂಡುಬಂದ ಹೆರಿಗೆ ನೋವನ್ನು ತಾಳಲಾರದೇ ಡಾ. ಇಂಪನಾಳನ್ನು ನರ್ಸಿಂಗ್ ಹೋಂಗೆ ಸೇರಿಸಿದರು. ವಿಪರೀತವಾದ ನೋವಿನಿಂದ ಬಳಲಿದ ಆಕೆಗೆ ಪ್ರಜ್ಞೆ ತಪ್ಪಿತು. ಡೆಲಿವರಿಯನ್ನು ಮಾಡುತ್ತಿದ್ದ ಡಾ. ಲೀಲಾವತಿ, ಇದೊಂದು ಕಾಂಪ್ಲಿಕೇಟೆಡ್ ಕೇಸ್ ಇದ್ದಂತಿದೆ ಎಂದು ಡಾ. ಮೈಥಿಲಿಯವರನ್ನು ಬರಮಾಡಿಕೊಂಡರು.

ಯಾಂತ್ರಿಕವಾಗಿ ಕೈಗೆ ಗ್ಲೌಸು ಹಾಕಿಕೊಂಡ ಮೈಥಿಲಿ, ನಿರಾಯಾಸವಾಗಿ ಸಿಜೇರಿಯನ್ ನಡೆಸಿ ಮಗುವನ್ನು ಹೊರತೆಗೆದರು. ಅಳದಾದಾಗ ಅದನ್ನು ತಲೆಕೆಳಗು ಮಾಡಿ ಕುಂಡಿ ಮೇಲೆ ಒಂದು ಪೆಟ್ಟು ಹಾಕಿ ಅಳಿಸಿ, ಇನ್‌ಕ್ಯುಬೇಟರ್‌ನಲ್ಲಿ ಇರಿಸಲು ಹೇಳಿದವರು, ಡೆಟಾಲ್‌ನಿಂದ ಕೈತೊಳೆದುಬಂದು ನಿರಾಳವಾಗಿ ತಾಯಿಯ ಮುಖದ ಮೇಲಿನ ಮಂದಹಾಸವನ್ನು ಆಸ್ವಾದಿಸಲು ಆಕೆಯ ಮುಖ ನೋಡಿದರು... ಅರೇ, ಡಾ.ಚಿರಂಜೀವಿ! ಆಗ ತಾನೇ ಪ್ರಜ್ಞೆ ಮರುಕಳಿಸಿದ್ದರಿಂದ ತಿಳಿನಿದ್ದೆಯಿಂದ ಎದ್ದಂತೆ ಕಿರುನಗೆ ಬೀರಿದ ಆಕೆ, ಎದುರಿಗಿದ್ದ ಏಫ್ರಾನ್‌ಮಾಸ್ಕ್ ಧರಿಸಿದ್ದ ಡಾ. ಮೈಥಿಲಿಯನ್ನು ಗುರುತಿಸಲಾಗದೇ, 'ನಮಸ್ತೆ ಡಾಕ್ಟರ್.. ನಾನು ಡಾ.ಇಂಪನಾ..' ಎಂದು ಪರಿಚಯಿಸಿಕೊಂಡಳು.

ಪಕ್ಕಕ್ಕೆ ಹೊರಳಿ, ಕೈ ಆಡಿಸಿ, ಹಸುಗೂಸಿನ ಸ್ಪರ್ಶದಿಂದ ಉತ್ಕಟವಾದ ತಾಯ್ತನದ ಸುಖವನ್ನು ಅನುಭವಿಸಿದಳು. ಜೀವಾಮೃತವನ್ನು ಧಾರೆಯೆರೆಯಲು ಭಾರವಾದ ಎದೆಯನ್ನು ಮಗುವಿನ ತುಟಿಯತ್ತ ಕೊಂಡೊಯ್ದಳು...

ಪ್ರತಿಕ್ರಿಯಿಸಿ: feedback@sudha.co.in